
## ಕಲ್ಪನೆ ಕಾವ್ಯ



## ಬಲೂನುಗಳೇ ಹೀಗೆ

ಈ ಬಲೂನುಗಳೇ ಹೀಗೆ
ನಮ್ಮದೇ ಉಸಿರು ಪಡೆದು
ತುಂಬುತ್ತವೆ ನಮ್ಮ ಮನದಿ
ಬಣ್ಣಬಣ್ಣದ ಕನಸುಗಳನು

ಈ ಕನಸುಗಳಿಗಂತೂ
ಆದಿಯಿಲ್ಲ, ಅಂತ್ಯವಿಲ್ಲ
ಆದರೂ ಬಿತ್ತುವುದು ಸತ್ಯ
ನಮ್ಮ ಮನದಿ ಆಶಯುಗಳನು

ಕನಸುಗಳನು ತುಂಬಿಕೊಂಡ
ಬಲೂನ್ ಗಳನು ಹಾರಿಸಲು
ಹೊರಟ ಜೋಡಿಯ ಮುಂದೆ
ಕಾಣುತ್ತಿವೆ ಭವಿಷ್ಯದ ನಾಳೆಗಳು

ಕನಸುಗಳ ಜೊತೆಯಲ್ಲಿರಲು
ನಾಳಿನ ಸುಂದರ ಕಲ್ಪನೆಗಳು
ಭೂತ, ವರ್ತಮಾನದ ಜೊತೆಯಲ್ಲಿ
ಭವಿಷ್ಯವೂ ಆಗಲಾರದೇನು ಮಧುರ

**ಎಚ್.ಕೆ. ರಾಘವೇಂದ್ರ**

## ಚಿರಯೌವನ

ಒಳಗಿನ ಹವೆಗೆ ಉಬ್ಬಿಸುವ ಚಪಲ
ಹೊರಗಿನ ಹವೆಗೆ ತೇಲಿಸುವ ತವಕ
ಇವೆರಡರ ಮಧ್ಯದಲಿ
ತೆಳುವಾದರೂ ತನಗಿಷ್ಟದಂತೆ
ತೂರಾಡುತ್ತ ತನುಮನ
ತುಂಬುವ ಚೆಂದದ ಬಲೂನ್..

ಕೆಲವೊಂದು ಕೆಂಪು, ಹಲವು ಹಸಿರು
ಕಂದನ ಹಸುಗಲ್ಲದ ಗುಲಾಬಿ
ಇನ್ನೂ ಹಲವು ಹೊಂಬಣ್ಣದ ಹಳದಿ
ನಭೆಯನ್ನೇ ಹೊತ್ತ ನೀಲಿ
ಇವೆಲ್ಲ ಸೇರಿ, ಬಾನಲಿ ತೇಲಿ
ಚೈತನ್ಯದ ಚೆಲುವು, ನಿತ್ಯ ನೂತನ...

ಬದುಕು ಹೀಗೇ ಮನುಜಾ,
ಒಳಬೇಗುದಿಗೆ ಜಗ್ಗದೇ
ಹೊರ ಒತ್ತಡ, ಬಯಕೆಗಳಿಗೆ ಬಗ್ಗದೇ
ಯಾವ ರಂಗಿನಲ್ಲೂ ಯಾರ ಸಂಗದಲ್ಲೂ
ನಗುತ, ನಲಿಯುತಿರಲು
ನಮ್ಮದೂ ಚಿರಯೌವನ.....

**ದೀಪಕ ಜೋಶಿ**